ಶ್ರೀ ಸಿ. ಎಂ. ಎಸ್. ಶಾಸ್ತ್ರಿ:— ಅವರಿಗೆ ಲಿಸ್ಟ್ ಕೈಗೆ ಸಿಕ್ಕಿ ಒಂದು ಸೆಕೆಂಡ್ ಆಯಿತು. ಆದ್ದರಿಂದ ಈ ಪ್ರಶ್ನೆಯನ್ನು ಕೊನೆಯಲ್ಲಿ ತೆಗೆದುಕೊಂಡರೆ ಒಳ್ಳೆಯದಾಗಿರುತ್ತದೆ ಅಲ್ಲವೇ?

SRI M. MALLAPPA:—In view of the fact that we have received the list just now, I request you to hold over the question.

MR. DEPUTY SPEAKER:—The question is held over.

ಮಾನ್ಯ ಶ್ರೀ ದೊಡ್ಡಬೋರೇಗೌಡರ ೩೫೫ನೇ ಪ್ರಶ್ನೆಯನ್ನು ಶ್ರೀ ಎನ್ ಎ. ಚನ್ನೇಗೌಡರು ಹಾಕಲು ನಾನು ಅನುಮತಿ ಕೊಟ್ಟಿದ್ದೇನೆ.

Copies placed in the Mysore Legislature Library.

UNAUTHORISED CULTIVATION OF TANK-BEDS IN MANDYA DISTRICT

385. SRI N. N. CHANNEGOWDA (Pandavapura) [on behalf of Sri B. DODDABORE GOWDA (Srirangapatna)]:—

Will the Minister of State for Minor Irrigation be pleased to state;

(*a*) the tank beds that are being cultivated without the permission of Government in Mandya District;

(*b*) the extent of tank bed area that is being cultivated in each of these tanks by encroachment:

(*c*) whether it has come to the notice of Government that the ryots are demolishing waste-weir of the tank every year so as to make the cultivated area not te be submerged;

(*d*) the total amount spent on the waste-weirs of these tanks every year;

(*e*) whether the achkatdars would be put to loss every year; if so, whether the Government will bear this loss;

(*f*) the action taken by them in respect of such persons?

SMT. BASAVARAJESWARI (Deputy Minister for Social Welfare) [on behalf of] SRI A.J. DODDAMETI (Minister of State for Minor Irrigation):-

(*a*) and (*b*) *Vide* Statement appended.

(*c*) Yes

(*d*) No amount is spent.

(*e*) No.

(*f*) Suitable action has been taken as per Mysore Irrigation Act.

STATEMENT

				Area Acres Gts.
Mandya Taluk:				
1	Hunjanakere	...	...	39-12
2	Hanakere	...	...	15-02
3	Guthalu Kere	...	...	24-16
4	Malligere Kere	...	...	10-04
5	Lokasara Kere	...	...	12-07
6	Sundahalli Kere	...	...	25-00
7	Mangala Kere	...	...	20-00
8	Bellundagere Kere	...	...	30-00
9	P. Gowdagere Kere	...	...	30-00
10	Mandya Kere	...	...	25-00
11	Budanur Kere	...	...	25-00
Maddur Taluk:				
1	Doddarasinakere Village	...	...	40-00
2	Goluru Kere	...	...	45-39
3	Nambinayakanahalli Kere	...	...	25-30
4	Huligerepura Kere	...	...	25-12
5	Shankarapura	...	...	27-00
Malavalli Taluk				
	Nil			
Pandavapura Taluk:				
1	Damadahalli Kere	...	...	200-00
2	Sunkathonnur	...	...	4-00
Srirangapatna Taluk:				
1	Arakere	...	...	5-00
2	Alagudu	...	...	1-20
3	Dodda Arehalli	...	...	3-00
4	Bettihalli	...	...	3-20
5	Bannahalli	...	...	0-30
6	Seehalli	...	...	3-00
7	Thadagavadi	...	...	2-20
Krishnarajapet Taluk:				
	Nil			
Nagamangala Taluk:				
1	Bindanahalli Tank	...	...	4-00
2	Sanakahalli (Katte)	...	...	4-17
3	Ammanakatte	...	...	0-30

ಶ್ರೀ ಎನ್. ಎ ಚನ್ನೇಗೌಡ;—ದಾಮದಹಳ್ಳಿ ಕೆರೆಯಲ್ಲಿ ೨೦೦ ಎಕರೆಗಳಷ್ಟು ಅಕ್ರಮ ಸಾಗುವಳಿ ಮಾಡುತ್ತಿದ್ದಾರೆ. ಅವರು ಅಷ್ಟು ಜಮೀನನ್ನು ಅಕ್ರಮಿಸಿಕೊಳ್ಳುವವರೆಗೆ ಸರ್ಕಾರದವರು ನಿದ್ರೆ ಮಾಡುತ್ತಿದ್ದರೇ? ಅವರನ್ನು ಈಗಲಾದರೂ ಬಿಡಿಸಿ ಆ ಕೆರೆಯ ಹೂಳನ್ನು ತೆಗೆಸುವುದಕ್ಕೆ ಏರ್ಪಾಡು ಮಾಡುತ್ತೀರಾ?

†ಶ್ರೀಮತಿ ಬಸವರಾಜೇಶ್ವರಿ;—ಆ ತರಹ ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೆಂದು ಸರ್ಕಾದ ಗಮನಕ್ಕೆ ಬಂದಕೂಡಲೆ ಅಲ್ಲಿನ ರೆವಿನ್ಯೂ ಅಧಿಕಾರಿಗಳು ಅತಿ ತೀವ್ರವಾಗಿ ಸೆಕ್ಷನ್ ೫೫ರ ಪ್ರಕಾರ ಅವರ ಮೇಲೆ ಕೇಸ್ ಫೈಲ್ ಮಾಡಿದ್ದಾರೆ. ಕನ್‌ವಿಕ್ಷನ್ ಆಗಿದೆ.

Sri D. B. KALMANKAR:—May I know from when the lands are cultivated without the permission of the Government?

SMT. BASAVARAJESWARI;;—The actual date is not available.

ಶ್ರೀ ಎಂ. ನಾಗಪ್ಪ;—ಮೈಸೂರು ಇರ್ರಿಗೇಷನ್ ಆಕ್ಟ್ ಪ್ರಕಾರ ರೈತರಿಗೆ ನೀರನ್ನು ಒದಗಿಸಲು ಈ ಕೆಲಸಗಳನ್ನು ತಾವು ಮಾಡಿಕೊಡದೇ ಇದ್ದರೆ ರೈತರಿಗೆ ಬಹಳ ಅನ್ಯಾಯವಾಗುವುದು. ಅದಕ್ಕಾಗಿ ಸರ್ಕಾರದವರು ಅವರಿಗೆ ಆಗುವ ನಷ್ಟವನ್ನು ತುಂಬಿಸಿಕೊಡುತ್ತೀರಾ?

ಶ್ರೀಮತಿ ಬಸವರಾಜೇಶ್ವರಿ.—ಆ ತರಹ ನಷ್ಟವೇನೂ ಇಲ್ಲ. ಇದು ವಾಣಿವಿಲಾಸ್ ಕ್ಯಾಚ್‌ಮೆಂಟ್ ಏರಿಯಾದಲ್ಲಿದ್ದುದರಿಂದ, ನೀರಿನ ತೊಂದರೆ ಜನರಿಗೆ ಆಗಿಲ್ಲ. ಅಲ್ಲಿ ಆ ತರಹ ಎನ್‌ಕ್ರೋಚ್‌ಮೆಂಟ್ ಇದ್ದುದರಿಂದ ೫ವತ್ತಿನ ದಿವಸ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದಾರೆ. ಮಾನ್ಯ ಸದಸ್ಯರು ಹೇಳಿರತಕ್ಕ ವಿಷಯ ಅಲ್ಲಿ ಬರುವುದಿಲ್ಲ. ಅಲ್ಲಿ ನೀರನ್ನು ಉಪಯೋಗಿಸುವ ಅಚ್ಚುಕಟ್ಟುದಾರರಿಗೆ ಅದರಿಂದೇನೂ ತೊಂದರೆಯಾಗುವುದಿಲ್ಲ.

ಶ್ರೀ ಕೆ. ಎಂ. ತಮ್ಮಯ್ಯ;—ಕೆರೆಯ ಅಂಗಳದಲ್ಲಿ ಆಜುಬಾಜಿನಲ್ಲಿ ಕಲ್ಟಿವೇಷನ್ ಆಗಿರುವುದರಿಂದ, ಈಗಾಗಲೇ ಕೆರೆಯಲ್ಲಿ ಹೂಳು ಕೂತು ಅಲ್ಲಿನ ಅಚ್ಚುಕಟ್ಟುದಾರರಿಗೆ ತೊಂದರೆಯಾಗುವುದಿಲ್ಲವೇ?

ಶ್ರೀಮತಿ ಬಸವರಾಜೇಶ್ವರಿ;—ಎಲ್ಲೆಲ್ಲಿ ಕೆರೆಯ ಕೋಡಿ ಒಡೆದಿದ್ದಾರೆಂದು ಸರ್ಕಾರದ ಗಮನಕ್ಕೆ ಬಂದಿದೆಯೋ ಅಲ್ಲೆಲ್ಲಾ ರಿಪೇರಿ ಮಾಡಿದ್ದೇವೆ. ಏನಾದರೂ ಕೇಸುಗಳನ್ನು ಹಾಕಿದರೆ, ಅಲ್ಲಿ ಸಾಕ್ಷಿಗಳೇ ಸಿಗುವುದಿಲ್ಲ. ಯಾರು ಅದಕ್ಕೆ ನಿಜವಾಗಿ ಕಾರಣರು ಎಂಬುದು ಸರ್ಕಾರಕ್ಕೆ ತಿಳಿದಿಲ್ಲ. ತಿಳಿದ ಕಡೆಗಳಲ್ಲಿ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್;—ಈ ಬಗರ್ ಹುಕುಂ ಸಾಗುವಳಿ ಪಟ್ಟಿಯನ್ನು ನೋಡಿದರೆ ಈ ಸರ್ಕಾರ ಇದೆಯೋ ಇಲ್ಲವೊ ಎನ್ನುವ ಅನುಮಾನ ಬರುತ್ತದೆ. ನೀರಾವರಿ ಆಕ್ಟ್ ಪ್ರಕಾರ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದಿರಿ. ಅದೇನು ಕ್ರಮ? ಬಗರ್ ಹುಕುಂ ಮಾಡತಕ್ಕ ಬಂಡವಾಳಶಾಹಿಗಳನ್ನು ತಡೆಮಾಡುವುದಕ್ಕೆ ತಕ್ಷಣ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೀರಾ?

ಶ್ರೀಮತಿ ಬಸವರಾಜೇಶ್ವರಿ;—ಅದಕ್ಕೆ ನಾನು ಈಗಾಗಲೇ ಉತ್ತರ ಹೇಳಿದ್ದೇನೆ. ಒಂದು ಕೇಸಿನಲ್ಲಿ ಸೆಕ್ಷನ್ ೫೫ರ ಪ್ರಕಾರ ಕ್ರಮ ತೆಗೆದುಕೊಂಡಿದ್ದೇವೆ. ಕನ್‌ವಿಕ್ಷನ್ ಆಗಿದೆ. ಯಾರು ಹೇಗೆ ಮಾಡುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಬಂದರೂ ಅದು ರುಜುವಾತು ಆಗುವುದು ಕಷ್ಟವಿದೆ. ಸರ್ಕಾರ ಈಗಾಗಲೇ ತಕ್ಕ ಕ್ರಮ ತೆಗೆದುಕೊಂಡಿದೆ.

†Asteriks indicates that remarks or speeches have not been revised by the member concerned.

ಶ್ರೀ ಎನ್.ಎ. ಚನ್ನೇಗೌಡ:—ಕೆರೆಯ ಕೋಡಿ ಒಡೆದಿರುವುದನ್ನು ದುರಸ್ತು ಮಾಡುವುದಕ್ಕೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಇದುವರೆಗೆ ಎಷ್ಟು ಖರ್ಚುಮಾಡಿದ್ದೀರಿ? ಪ್ರತಿವರ್ಷ ಈ ರೀತಿ ಕೋಡಿ ಒಡೆಯುತ್ತಾ ಇರುವುದರಿಂದ ತಕ್ಷಣ ತಕ್ಕ ಬಂದೋಬಸ್ತ್ ಮಾಡಿ ರೈತರಿಗೆ ಏನು ಅನುಕೂಲಗಳನ್ನು ಮಾಡಿಕೊಡುತ್ತೀರಿ?

ಶ್ರೀಮತಿ ಬಸವರಾಜೇಶ್ವರಿ:—ಏನಾದರೂ ವೆಸ್ಟೆಡ್ ಇಂಟರೆಸ್ಟ್ ಇದ್ದರೆ ಈ ರೀತಿ ಆಗುತ್ತದೆ. ಅಂಥ ಕಡೆ ಪರದಿಯನ್ನು ತರಿಸಿ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಅಲ್ಲಿ ಈರೀತಿ ಅಕ್ರಮ ಸಾಗುವಳಿ ಎಷ್ಟೋ ವರ್ಷಗಳಿಂದ ಮಾಡುತ್ತಾ ಇದ್ದಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳ ಮೂಲಕ ಅಕ್ರಮ ಸಾಗುವಳಿ ಮಾಡುವ ಜನರಿಂದ ಜಮೀನು ಬಿಡಿಸಿ ಅಕ್ರಮವಾಗಿ ಪ್ರವೇಶ ಮಾಡಿರುವುದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀಮತಿ ಬಸವರಾಜೇಶ್ವರಿ:—ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಅಲ್ಲಿರುವ ಅಧಿಕಾರಿಗಳಿಗೆ ಈಗಾಗಲೇ ಆದೇಶವನ್ನು ಕೊಟ್ಟಿದೆ.

ಶ್ರೀ ಸಿ.ಎಂ.ಎಸ್. ಶಾಸ್ತ್ರಿ:—ಈ ಕೆರೆಗಳಲ್ಲಿ ಅಕ್ರಮ ಸಾಗುವಳಿ ಮಾಡುತ್ತಾ ಇರುವುದಕ್ಕೆ ಸರ್ಕಾರದವರೇ ಅನುಮತಿ ಕೊಟ್ಟು ಮಾಡಿಸುತ್ತಿದ್ದಾರೆಂಬುದು ನಿಜವೇ?

ಶ್ರೀಮತಿ ಬಸವರಾಜೇಶ್ವರಿ:—ಹಾಗೇನೂ ಇಲ್ಲ.

ಶ್ರೀ ಎನ್.ಎ. ಚನ್ನೇಗೌಡ:—ಈಗ ಆ ಕೆರೆಯ ಅಂಗಳದಲ್ಲಿ ಅಕ್ರಮವಾಗಿ ಜಮೀನು ಸಾಗುವಳಿ ಮಾಡುವವರು ರಾಜಕೀಯ ಪಕ್ಷಕ್ಕೆ ಸೇರಿರುವುದರಿಂದ, ಅವರ ಮೇಲೆ ಏನಾದರೂ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವುದು ಕಷ್ಟ ಅಲ್ಲವೇ?

ಶ್ರೀಮತಿ ಬಸವರಾಜೇಶ್ವರಿ —ಇಲ್ಲ.

ಶ್ರೀ ಎಂ. ಮಲ್ಲಪ್ಪ:—ಈ ಅಕ್ರಮವನ್ನು ತಡೆಯುವುದಕ್ಕೆ ರೆವಿನ್ಯೂ ಅಧಿಕಾರಿಗಳೇ ಸಾಕೇ ಅಥವಾ ಪೋಲೀಸಿನವರೂ ಬೇಕೆ?

ಶ್ರೀಮತಿ ಬಸವರಾಜೇಶ್ವರಿ:—ಪಿ.ಡಬ್ಲ್ಯು.ಡಿ. ಶಾಖೆಯ ಅಧಿಕಾರಿಗಳ ಜೊತೆಗೆ ಪೋಲೀಸಿನವರು ಇದ್ದು ರೆವಿನ್ಯೂ ಇಲಾಖೆಯ ಮುಖಾಂತರ ಕ್ರಮ ತೆಗೆದುಕೊಳ್ಳುತ್ತಾರೆ.

AMOUNT SPENT ON FISHERIES ROADS

390. SRI B. BHASKAR SHETTY (Kaup).—

Will the Minister of State for Fisheries and Ports be pleased to state;—

(*a*) the extent of fisheries roads constructed so far in the State by the Department of Fisheries, Government of Mysore and total amount spent so far for these roads;